# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1452 |
| ಉತ್ತರಿಸುವ ದಿನಾಂಕ | 17-3-2021 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಸಿ. ಕೊಂಡಯ್ಯ |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರತಿ ಗ್ರಾಮಕ್ಕೆ ಜಿಲ್ಲಾಧಿಕಾರಿ ಕಾರ್ಯಕ್ರಮವನ್ನು ಯಾವ ಯಾವ ಜಿಲ್ಲೆಗಳು ಅನುಷ್ಠಾನಗೊಳಿಸಿವೆ; ಇದರ ರೂಪುರೇಷೆಗಳೇನು: | ಎಲ್ಲಾ ಜಿಲ್ಲೆಗಳು ಅನುಷ್ಠಾನಗೊಳಿಸಿದೆ.<br><br>"ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ" ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳು, ಭೂದಾಖಲೆಗಳ ಉಪನಿರ್ದೇಶಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರು, ಉಪ ವಿಭಾಗಾಧಿಕಾರಿಯವರು, ಸಂಬಂಧಪಟ್ಟ ತಹಶೀಲ್ದಾರರು ಹಾಗೂ ಇತರೆ ಇಲಾಖೆಯ ಅಧಿಕಾರಿಗಳೊಂದಿಗೆ ಭಾಗವಹಿಸಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ನೇರವಾಗಿ ಸ್ಥಳದಲ್ಲಿ ಅರ್ಜಿಗಳನ್ನು ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಜಿಲ್ಲಾಧಿಕಾರಿಗಳ ಗ್ರಾಮ ವಾಸ್ತವ್ಯದಿಂದ ಜನರ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹರಿಸಲು ಕ್ರಮ ಕೈಗೊಳ್ಳುವ ವ್ಯವಸ್ಥೆಯಾಗಿದೆ. ಇದರಿಂದ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಗ್ರಾಮಸ್ಥರಿಗೆ ಸಿಗುವ ಸೌಲಭ್ಯಗಳ ಕುರಿತು ತಿಳುವಳಿಕೆಯನ್ನು ನೀಡಿ, ಸಾರ್ವಜನಿಕರು ಹಾಗೂ ಬಡ ಕುಟುಂಬಗಳ ರೈತರುಗಳಿಗೆ ಸ್ಥಳದಲ್ಲಿಯೇ ಅಗತ್ಯ ಮಾಹಿತಿ ಮತ್ತು ದಾಖಲಾತಿಗಳನ್ನು ಪಡೆದು ಬಗೆಹರಿಸಲು ಕ್ರಮಕೈಗೊಳ್ಳುವ ವ್ಯವಸ್ಥೆ ಮಾಡಲಾಯಿತು. ಗ್ರಾಮಗಳಿಗೆ ಭೇಟಿ ಮಾಡಿ ವಾಸ್ತವ್ಯ ಹೂಡುವುದರಿಂದ ಗ್ರಾಮಗಳ ಮೂಲಭೂತ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಗೆ ಸರ್ಕಾರದಿಂದ ದೊರಕಬಹುದಾದ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಗಿರುತ್ತದೆ. ಕಂದಾಯ ಇಲಾಖೆಯ ಸೇವೆಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು, ಪಹಣಿಯ ಲೋಪದೋಷಗಳನ್ನು ಸರಿಪಡಿಸುವುದು, ಪೌತಿ ಖಾತೆ ಬದಲಾವಣೆ, ಅರ್ಹರಿಗೆ ವಿವಿಧ ರೀತಿಯ ಪಿಂಚಣಿ ಸೌಲಭ್ಯ ಮಂಜೂರು, ಆಶ್ರಯ ಯೋಜನೆಗೆ ಜಮೀನು ಕಾಯ್ದಿರಿಸುವುದು, ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ಸ್ಮಶಾನದ ಅವಶ್ಯಕತೆಯ ಬಗ್ಗೆ ಪರಿಶೀಲನೆ ಹಾಗೂ ಇತರ ಇಲಾಖೆಯ ಸೇವೆಗಳಾದ ಅರ್ಹರಿಗೆ ಬಿಪಿಎಲ್ ಪಡಿತರ ಚೀಟಿ ವಿತರಣೆ, |

| | | |
|---|---|---|
| | | ಸರ್ಕಾರಿ ವಸತಿ ನಿಲಯಗಳ ಪರಿಶೀಲನೆ, ಅಂಗನವಾಡಿ ಹಾಗೂ ಶಾಲೆಗಳಿಗೆ ಭೇಟಿ, ಆಧಾರ್ ಕಾರ್ಡ್ ವಿತರಣೆ ಮುಂತಾದ ಸೇವೆಗಳನ್ನು ಗ್ರಾಮ ಮಟ್ಟದಲ್ಲಿಯೇ ಒದಗಿಸುವ ಸಂಬಂಧ ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳ ಮೇಲೆ ಕ್ರಮ ವಹಿಸಲಾಗುವುದು. |
| ಆ) | ಈ ಕಾರ್ಯಕ್ರಮ ದಿಂದ ಸಾರ್ವಜನಿಕರ ಕುಂದು ಕೊರತೆಗಳು ನಿವಾರಣೆಯಾಗಿವೆಯೇ: | ಹೌದು |
| ಇ) | ಸಾರ್ವಜನಿಕರಿಂದ ಬಂದ ದೂರುಗಳು ಬಗ್ಗೆ ಕೈಗೊಂಡ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು) | ಅನುಬಂಧ ದಲ್ಲಿ ನೀಡಲಾಗಿದೆ. |

ಸಂಖ್ಯೆ:ಕಂಇ 11 ವಿಮಕ 2021

**(ಆರ್.ಅಶೋಕ್)**
**ಕಂದಾಯ ಸಚಿವರು**

# ಅನುಬಂಧ

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಸಿ. ಕೊಂಡಯ್ಯ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1452 ಕ್ಕೆ ಅನುಬಂಧ

### ಬೆಂಗಳೂರು ವಿಭಾಗ

| | |
|---|---|
| ಬೆಂಗಳೂರು ನಗರ | ಅರ್ಜಿದಾರರು ಸಲ್ಲಿಸಿರುವ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ ವಿಲೇವಾರಿ ಮಾಡಲು ಕ್ರಮ ವಹಿಸಲಾಗುವುದು. |
| ಬೆಂಗಳೂರು (ಗ್ರಾ) | ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ. |

| ಸೌಲಭ್ಯಗಳ ವಿವರ | ಕಾರ್ಯಕ್ರಮ ನಡೆದ ಸ್ಥಳ | | | |
|---|---|---|---|---|
| | ದೊಡ್ಡಬಳ್ಳಾಪುರ ತಾಲ್ಲೂಕು, ಸಾಸಲು ಹೋಬಳಿ, ಹೊಸಹಳ್ಳಿ ಗ್ರಾಮ | ದೇವನಹಳ್ಳಿ ತಾಲ್ಲೂಕು, ವಿಜಯಪುರ ಹೋಬಳಿ, ಕೋರಮಂಗಲ ಗ್ರಾಮ | ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ ತವಟಹಳ್ಳಿ ಗ್ರಾಮ | ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಹೊನ್ನರಾಯನ ಹಳ್ಳಿ ಗ್ರಾಮ |
| ಎಸ್.ಎಸ್.ವೈ | 58 | 35 | 0 | 18 |
| ಒ.ಎ.ಪಿ | 97 | 26 | 20 | 46 |
| ಡಿ.ಡಬ್ಲ್ಯೂ.ಪಿ | 17 | 8 | 9 | 21 |
| ಪಿ.ಹೆಚ್.ಪಿ | 4 | 3 | 0 | 3 |
| ಮನಸ್ವಿನಿ | 2 | 0 | 0 | 1 |
| ಪೌತಿ ಖಾತೆ | 30 | 2 | 6 | 49 |
| ಪಹಣಿ ತಿದ್ದುಪಡಿ | 16 | 2 | 2 | 18 |
| ಆಧಾರ್ ಕಾರ್ಡ್ ತಿದ್ದುಪಡಿ | 381 | 0 | 10 | 0 |
| ಪೋಡಿ ಮುಕ್ತ ಗ್ರಾಮದ ಫಲಾನುಭವಿಗಳು | 5 | 271 | 23 | 0 |

| | | | | |
|---|---|---|---|---|
| ಎಪಿಕ್ ಕಾರ್ಡ್ ತಿದ್ದುಪಡಿ | 63 | 0 | 8 | 3 |
| ಸರ್ಕಾರಿ ಉದ್ದೇಶಕ್ಕೆ ಸರ್ಕಾರದ ವಿವಿಧ ಇಲಾಖೆಗಳಿಗೆ ವರ್ಗಾವಣೆ ಆದ ಜಮೀನುಗಳು | 11 | 3 | 0 | 1 |
| ಸಾಗುವಳಿ ಚೀಟಿಯಂತೆ ಖಾತೆ | 12 | 0 | 0 | 9 |
| ಎನ್.ಎಸ್.ಎ.ಪಿ. ಫಲಾನುಭವಿಗಳು | 03 | 0 | 0 | 2 |
| ಇತರೆ ಯೋಜನೆಗಳ ಫಲಾನುಭವಿಗಳು | 00 | 0 | 0 | 0 |
| ಒಟ್ಟು | 699 | 350 | 78 | 171 |

| | |
|---|---|
| ರಾಮನಗರ | ಸಾರ್ವಜನಿಕ ಕುಂದುಕೊರತೆಗಳ ಬಗ್ಗೆ ಸ್ವೀಕೃತಿಯಾದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಂಡು ವಿಲೇವಾರಿಗೊಳಿಸಲಾಗುತ್ತಿದೆ. |
| ಕೋಲಾರ | ಗ್ರಾಮ ವಾಸ್ತವ್ಯದಂದು ಸಾರ್ವಜನಿಕರಿಂದ ಒಟ್ಟು 929 ಮನವಿಗಳು ಸ್ವೀಕೃತವಾಗಿದ್ದು, ಈ ಪೈಕಿ 706 ಮನವಿಗಳನ್ನು ಇತ್ಯರ್ಥಪಡಿಸಲಾಗಿದ್ದು, 223 ಮನವಿಗಳು ಪ್ರಗತಿಯಲ್ಲಿರುತ್ತವೆ. ಸದರಿ ಮನವಿಗಳಿಗೆ ನಿಗದಿತ ಕಾಲಾವಕಾಶವಿದ್ದು, ಪರಿಶೀಲಿಸಿದ ಕೂಡಲೇ ಆದ್ಯತೆ ಮೇರೆಗೆ ಇತ್ಯರ್ಥಪಡಿಸಲಾಗುವುದು. |
| ಚಿಕ್ಕಬಳ್ಳಾಪುರ | ಸಾರ್ವಜನಿಕರಿಂದ ಸ್ವೀಕೃತಗೊಂಡ ಅರ್ಜಿಗಳನ್ನು ಕಾನೂನಿನಲ್ಲಿ ಅಡಚಣೆ ಇಲ್ಲದ ಕ್ರಮಬದ್ಧವಾದ ದೂರುಗಳನ್ನು ಸಾರ್ವಜನಿಕರ ಉಪಸ್ಥಿತಿಯಲ್ಲಿಯೇ ಬಗೆಹರಿಸಿ, ಬಾಕಿ ಉಳಿದ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆ ಹಸ್ತಾಂತರಿಸಿ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ. |
| ತುಮಕೂರು | ದಿನಾಂಕ:20-02-2021ರಂದು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ತುಮಕೂರು ಜಿಲ್ಲೆಯಲ್ಲಿ 988 ಅರ್ಜಿಗಳು ಸ್ವೀಕೃತವಾಗಿದ್ದು, 237 ಅರ್ಜಿಗಳನ್ನು ಸ್ಥಾನಿಕವಾಗಿ ಇತ್ಯರ್ಥಗೊಳಿಸಲಾಗಿದೆ. ಉಳಿಕೆ 751 ಅರ್ಜಿಗಳು ಕ್ರಮಕ್ಕಾಗಿ ವಿವಿಧ ಇಲಾಖೆಗಳಲ್ಲಿ ಬಾಕಿ ಇರುತ್ತದೆ. |
| ಚಿತ್ರದುರ್ಗ | ಸಾರ್ವಜನಿಕರಿಂದ ಬಂದ ದೂರುಗಳ ಬಗ್ಗೆ ಪರಿಶೀಲಿಸಿ ಆದ್ಯತೆ ಮೇಲೆ ಕ್ರಮವಹಿಸಲಾಗಿದೆ. |

| | |
|---|---|
| ದಾವಣಗೆರೆ | ಸಾರ್ವಜನಿಕರಿಂದ ವಿವಿಧ ಸೇವೆಗಳಿಗಾಗಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಸ್ವೀಕೃತವಾದ 368 ಅರ್ಜಿಗಳಲ್ಲಿ ಕ್ರಮವಹಿಸಲಾಗಿ, ಕೋರಿರುವ ಸೇವೆಯನ್ನು ಒದಗಿಸಲಾಗಿದೆ. |
| ಶಿವಮೊಗ್ಗ | ಇಲಾಖಾ ವ್ಯಾಪ್ತಿಯ ಅರ್ಜಿಗಳನ್ನು ತುರ್ತಾಗಿ ವಿಲೇವಾರಿ ಮಾಡಲಾಗುತ್ತಿದೆ ಹಾಗೂ ಜಂಟಿ ಸಮೀಕ್ಷೆಯ ಅವಶ್ಯಕತೆ ಇರುವಂತಹ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಪರಿಶೀಲಿಸಿ ನಿಯಮಾನುಸಾರ ತುರ್ತಾಗಿ ಕ್ರಮ ಕೈಗೊಳ್ಳಲು ರವಾನಿಸಿ ಮಾಹಿತಿಯನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ತಿಳಿಸಲಾಗಿರುತ್ತದೆ. |

## ಮೈಸೂರು ವಿಭಾಗ

| | |
|---|---|
| ಚಾಮರಾಜನಗರ | ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಸ್ವೀಕೃತವಾಗಿರುವ ಅರ್ಜಿಗಳ ಪೈಕಿ, ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಅರ್ಜಿಗಳನ್ನು ನಿಯಾಮನುಸಾರ ಸ್ಥಳದಲ್ಲಿಯೇ ಇತ್ಯರ್ಥಪಡಿಸಲು ಹಾಗೂ ಇತರೆ ಇಲಾಖೆಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ. |
| ಚಿಕ್ಕಮಗಳೂರು | ಗ್ರಾಮ ಭೇಟಿ-ವಾಸ್ತವ್ಯ ಕಾರ್ಯಕ್ರಮದ ಸಂಬಂಧವಾಗಿ ಜಿಲ್ಲೆಯಲ್ಲಿ ಒಟ್ಟು 566 ಅರ್ಜಿಗಳು ಸ್ವೀಕೃತವಾಗಿದ್ದು, ಆ ಪೈಕಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ 372 ಅರ್ಜಿಗಳು ಸ್ವೀಕೃತವಾಗಿದ್ದು, ಎಲ್ಲಾ ಅರ್ಜಿಗಳು ಸ್ಥಳದಲ್ಲಿಯೇ ಇತ್ಯರ್ಥ ಮಾಡಲಾಗಿದೆ. ಬಾಕಿ ಇರುವ ಪ್ರಕರಣಗಳು ವಿಲೇವಾರಿಗಾಗಿ ಸೂಕ್ತ ಕ್ರಮವಹಿಸುವಂತೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಗಿರುತ್ತದೆ. |
| ದಕ್ಷಿಣ ಕನ್ನಡ | ಗ್ರಾಮ ಭೇಟಿ-ವಾಸ್ತವ್ಯ ಕಾರ್ಯಕ್ರಮದ ಸಂಬಂಧವಾಗಿ ಜಿಲ್ಲೆಯಲ್ಲಿ ಒಟ್ಟು 883 ಅರ್ಜಿಗಳು ಸ್ವೀಕೃತವಾಗಿದ್ದು, ಆ ಪೈಕಿ 55 ಅರ್ಜಿಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಲಾಗಿದೆ. ಬಾಕಿ ಉಳಿದ ಒಟ್ಟು:828 ಅರ್ಜಿಗಳ ವಿಲೇವಾರಿಗಾಗಿ ಸೂಕ್ತ ಕ್ರಮವಹಿಸುವಂತೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಗಿರುತ್ತದೆ. |
| ಹಾಸನ | ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಅಗತ್ಯ ಕ್ರಮವಹಿಸಿ ಅರ್ಜಿದಾರರಿಗೆ ಸೂಕ್ತ ಮಾಹಿತಿ ನೀಡಲು ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.<br><br>ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು 1025 ಅರ್ಜಿಗಳು ಸ್ವೀಕೃತವಾಗಿದ್ದು ಸ್ಥಾನಿಕವಾಗಿ 215 ಅರ್ಜಿಗಳು ವಿಲೇವಾರಿಯಾಗಿದ್ದು ಬಾಕಿ 810 ಅರ್ಜಿಗಳು ಪರಿಶೀಲನಾ ಹಂತದಲ್ಲಿರುತ್ತದೆ. |
| ಕೊಡಗು | ಪೊನ್ನಂಪೇಟೆ ತಾಲ್ಲೂಕಿನ ಶ್ರೀಮಂಗಲ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ 99 ಅರ್ಜಿ ಸ್ವೀಕೃತವಾಗಿದ್ದು, ಇದರಲ್ಲಿ 13 ಅರ್ಜಿ ವಿಲೇವಾರಿ ಮಾಡಲಾಗಿರುತ್ತದೆ. ಉಳಿದ ಅರ್ಜಿಗಳು ವಿವಿಧ ಇಲಾಖೆಗಳಿಗೆ ಸಂಬಂಧಿಸಿದ್ದು ದೂರಿನ ಬಗ್ಗೆ ಶ್ರೀಘ್ರವಾಗಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಯವರಿಗೆ ಸೂಚಿಸಲಾಗಿದೆ. |

| | |
|---|---|
| ಮಂಡ್ಯ | ಸದರಿ ಕಾರ್ಯಕ್ರಮದಲ್ಲಿ ಸ್ವೀಕೃತಗೊಂಡ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಸ್ವೀಕರಿಸಿ, ಸ್ಥಳದಲ್ಲಿಯೇ ಪರಿಹಾರ ಸೂಚಿಸಿ ಅರ್ಜಿಯನ್ನು ವಿಲೇವಾರಿ ಮಾಡಲಾಗುತ್ತಿದೆ. ಹಾಗೂ ಉಳಿಕೆ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ನಿಯಾಮಾನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಿ ಕಳುಹಿಸಿ ಕೊಡಲಾಗಿದೆ. |
| ಮೈಸೂರು | ಸದರಿ ಕಾರ್ಯಕ್ರಮದಲ್ಲಿ ಸ್ವೀಕೃತಗೊಂಡ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಸ್ವೀಕರಿಸಿ ಸ್ಥಳದಲ್ಲಿಯೇ ಪರಿಹಾರ ಸೂಚಿಸಿ ಅರ್ಜಿಯನ್ನು ವಿಲೇವಾರಿ ಮಾಡಲಾಗುತ್ತಿದೆ. ಹಾಗೂ ಉಳಿಕೆ ಅರ್ಜಿಗಳನ್ನು ಸಂಬಂಧಸಿದಂತೆ ಇಲಾಖೆಗಳಿಗೆ ನಿಯಾಮನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಿ ಕಳುಹಿಸಿಕೊಡಲಾಗಿದೆ. |
| ಉಡುಪಿ | ಈ ಸಂದರ್ಭದಲ್ಲಿ ಒಟ್ಟು 642 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು ಈ ಪೈಕಿ 402 ಅರ್ಜಿಗಳನ್ನು ಸ್ಥಳದಲ್ಲಿಯೇ ಪರಿಹರಿಸಲಾಗಿದೆ. ಉಳಿದ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ವರ್ಗಾಯಿಸಲಾಗಿದ್ದು, ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. |

**ಕಲಬುರಗಿ ವಿಭಾಗ:-**

ಕಲಬುರಗಿ ಜಿಲ್ಲೆ: ಸಾರ್ವಜನಿಕರಿಂದ ಬಂದ ದೂರುಗಳ ಬಗ್ಗೆ ಸ್ಥಳದಲ್ಲಿಯೇ ಪರಿಹಾರ ನೀಡುವುದು ಹಾಗೂ ಬಾಕಿ ಇರುವ ಪ್ರಕರಣಕ್ಕೆ ನಿಯಮಾನುಸಾರ ಪರಿಶೀಲಿಸಿ ಇತ್ಯರ್ಥಗೊಳಿಸಲಾಗುವುದು

ಬೀದರ ಜಿಲ್ಲೆ: ಸಾರ್ವಜನಿಕರಿಂದ ಬಂದ ದೂರುಗಳ ಬಗ್ಗೆ ಸ್ಥಳದಲ್ಲಿಯೇ ಪರಿಹಾರ ನೀಡುವುದು ಹಾಗೂ ಬಾಕಿ ಇರುವ ಪ್ರಕರಣಕ್ಕೆ ನಿಯಮಾನುಸಾರ ಪರಿಶೀಲಿಸಿ ಇತ್ಯರ್ಥಗೊಳಿಸಲಾಗುವುದು.

ಬಳ್ಳಾರಿ ಜಿಲ್ಲೆ: ಸಾರ್ವಜನಿಕ ಸ್ವೀಕೃತವಾದ ದೂರುಗಳಿಗೆ ಸ್ಥಾನಿಕವಾಗಿಯೇ ಇತ್ಯರ್ಥ ಪಡಿಸಲಾಗುವ ಪ್ರಕರಣಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಲಾಗಿರುತ್ತದೆ. ಹಾಗೂ ಮನೆ ಮಂಜೂರಾತಿ, ಅಕ್ರಮ ಸಕ್ರಮಕ್ಕೆ ಸಂಬಂಧಪಟ್ಟ ಅರ್ಜಿಗಳನ್ನು, ಆಶ್ರಮ ಸಮಿತಿ ಮತ್ತು ಬಗರ ಹಕುಂ ಸಮಿತಿಯಲ್ಲಿ ಮಂಡಿಸಿ ಇತ್ಯರ್ಥಪಡಿಸಲಾಗುವುದು.

ಯಾದಗಿರಿ ಜಿಲ್ಲೆ: ಸಾರ್ವಜನಿಕರಿಂದ ಬಂದ ದೂರುಗಳ ಬಗ್ಗೆ ಸ್ಥಳದಲ್ಲಿಯೇ ಪರಿಹಾರ ನೀಡುವುದು ಹಾಗೂ ಬಾಕಿ ಇರುವ ಪ್ರಕರಣಕ್ಕೆ ನಿಯಮಾನುಸಾರ ಪರಿಶೀಲಿಸಿ ಇತ್ಯರ್ಥಗೊಳಿಸಲಾಗುವುದು

ರಾಯಚೂರು ಜಿಲ್ಲೆ: ಕಂದಾಯ ಇಲಾಖೆಯ ಒಟ್ಟು ಪ್ರಕರಣಗಳು:619 ಇತರೆ ಇಲಾಖೆಗಳ ಒಟ್ಟು ಪ್ರಕರಣಗಳು:68 ವಿಲೇವಾರಿಯಾದ ಒಟ್ಟು ಪ್ರಕರಣಗಳು:205, ಇತ್ಯಾರ್ಥವಾಗದೇ ಕಾಲಾವಕಾಶಕ್ಕಾಗಿ ಮೀಸಲಿರಿಸಿದ ಪ್ರಕರಣಗಳ ಸಂಖ್ಯೆ:414.

1. ಕಂದಾಯ ಇಲಾಖೆ: 414
2. ಜೆಸ್ಕಾಂ : 1
3. ಸಹಾಯಕ ನರ್ದೇಶಕರು ಇಲಾಖೆ: 4
4. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ: 2
5. ಶಿಕ್ಷಣ ಇಲಾಖೆ: 02
6. ಕರ್ನಾಟಕ ಸಾರಿಗೆ (ಎನ್.ಇ.ಕೆ.ಆರ್.ಟಿ.ಸಿ) ಇಲಾಖೆ: 01
7. ಅಬಕಾರಿ ಇಲಾಖೆ: 01

8. ಪೋಲಿಸ್ ಇಲಾಖೆ: 01
9. ಭೂ ದಾಖಲೆ ಇಲಾಖೆ: 05
10. ಪಂಚಾಯತ್ ರಾಜ್ ಇಲಾಖೆ: 51

ಕೊಪ್ಪಳ ಜಿಲ್ಲೆ: ಸಾರ್ವಜನಿಕರಿಂದ ಬಂದ ದೂರುಗಳ ಬಗ್ಗೆ ಸ್ಥಳದಲ್ಲಿಯೇ ಪರಿಹಾರ ನೀಡುವುದು ಹಾಗೂ ಸ್ಥಳಿಯವಾಗಿ ಬಗೆಹರಿಸಲು ಸಾಧ್ಯವಿಲ್ಲದ ಪ್ರಕರಣಗಳಿಗೆ ನಿಯಮಾನಸಾರ ಪರಿಶೀಲಿಸಿ ಇತ್ಯರ್ಥಗೊಳಿಸಲಾಗುವುದು.

**ಬೆಳಗಾವಿ ವಿಭಾಗ:-**

| | |
|---|---|
| ಬೆಳಗಾವಿ | ನಿಯಾಮನುಸಾರ ದೂರುಗಳ ಬಗ್ಗೆ ಸ್ಥಳದಲ್ಲಿಯೇ ಇತ್ಯರ್ಥಪಡಿಸಲಾಗುತ್ತದೆ. |
| ವಿಜಯಪುರ | 1175 ಅರ್ಜಿಗಳು ಸ್ವೀಕೃತವಾಗಿ ರುತ್ತವೆ. ಸ್ಥಳದಲ್ಲಿ 450 ಅರ್ಜಿಗಳು ಇತ್ಯರ್ಥಪಡಿಸಲಾಗಿದೆ. ಬಾಕಿ ಉಳಿದ 725 ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆ ಯವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ. |
| ಹಾವೇರಿ | 1209 ಅರ್ಜಿಗಳನ್ನು ಸ್ವೀಕೃತವಾಗಿರುತ್ತವೆ. ಸ್ಥಳದಲ್ಲಿ 850 ಅರ್ಜಿಗಳು ಇತ್ಯರ್ಥಪಡಿಸಲಾಗಿದೆ. ಬಾಕಿ ಉಳಿದ 359 ಅರ್ಜಿಗಳನ್ನು ಸಂಬಂದಪಟ್ಟ ಇಲಾಖೆಯವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ. |
| ಕಾರವಾರ | ಉತ್ತರ ಕನ್ನಡ ಜಿಲ್ಲೆಯಲ್ಲಿ ದಿನಾಂಕ:20.02.2021 ರಂದು ನಡೆದ ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ ಕಾರ್ಯ ಕ್ರಮದಲ್ಲಿ ಒಟ್ಟು 762 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 438 ಅರ್ಜಿಗಳು ಸ್ಥಾನಿಕ ಅರ್ಜಿಗಳಾಗಿದ್ದು ಅವುಗಳನ್ನು ಈಗಾಗಲೇ ವಿಲೆಗೊಳಿಸಲಾಗಿದೆ. ಬಾಕಿ ಉಳಿದ 324 ಅರ್ಜಿಗಳು ಇತರೆ ಇಲಾಖೆಗಳಿಗೆ ಸಂಬಂಧಪಟ್ಟರುವುದರಿಂದ ಸದರಿ ಅರ್ಜಿಗಳನ್ನು ಕೂಡಲೇ ಇತ್ಯರ್ಥಪಡಿಸಲು ಸಂಬಂಧಿಸಿದ ಇಲಾಖೆಗಳಿಗೆ ನಿರ್ದೇಶನ ನೀಡಲಾಗಿದೆ. |
| ಬಾಗಲಕೋಟ<br>ಧಾರವಾಡ<br>ಗದಗ | ಕೆಲವು ಮನವಿಗಳನ್ನು ಸ್ಥಳದಲ್ಲಿಯೇ ಪರಿಹರಿಸಲಾಗಿದ್ದು ಉಳಿದ ಮನವಿಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಕ್ರಮಕ್ಕಾಗಿ ಕಳುಹಿಸಲಾಗಿದೆ. |